ಷರತ್ತು 2. ಸದರೀ ಸ್ವತ್ತಿಗಾಗಿ ಹರಾಜುದಾರನು 1906—07ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದ್ದರಡ್ಡಿ ಕ್ಷಾಣಸ್ಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ ರೂಪಾಯಿ 64—4—9 ಆಗಿರುತ್ತೆ. ಈ ಮೊ

ಷರತ್ತು 3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ೯ಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡ ಬೇಕಾಗಿರುತ್ತೆ. ಉಳಿದ ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ಪರಭಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರ್ತಿ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮುಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರ ವರಿಂದ ಹರಾಜು ಮುಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರು, ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸ್ವೈ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯಾಗಲಿ ಯಾ ವಿಸ್ತೀರ್ಣದಲ್ಲಿಯಾಗಲಿ ಇರುವ ನ್ಯೂನತ್ಯಗಳಿಗೆ ಸರ್ಕಾರ್ ಮೆಂಟನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಕಟ್ಟಿನ ಅಧಿಕಾರಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು	ಅಂದಾಜು ಕಿಮ್ಮತ್ತು	ಜಮೀನು. ಸರ್ವೆ ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ, ತರೀ, ಬಾಗಾಯ್ತು ಅಥವಾ ಪರಂಪೋಕು.	ವಿಸ್ತೀರ್ಣ.	ಆಕಾರ.	ಅಂದಾಜು ಕಿಮ್ಮತ್ತು.	ಸರ್ಕಾರಕ್ಕೂ ಕೊಡಬೇಕಾದ ಜೋಡೀ ಯಾ ಕಾಯಂಗುತ್ತಾ ಮೊಬಲಗು.	ಸರ್ಕಾರಕ್ಕೂ ಸ್ವೀಕಾರವಾದ ಬಾಕೀ ಮೊಬಲಗು.
ತುಮಕೂರು ತಿಲಕಾಹು	ಬಾ ಮೇಗಡಹಳ್ಳಿ	ಗುತ್ತಾರಾಡಿ ಹೆಸರಿನ ನರಸಿಂಯಾರ್	...	...	ಗ್ರಾಮದ ಹೊರ್ತಾ.	ಖುಷ್ಕಿ ...	ಎ. ಗು. 1160 1	ಜೈ 2. ಎ 12	ರೂ. 1,000	ರೂ. ಪೈ 9	ರೂ. ಆ. ಪೈ. 62 12 9 ಜಿಲ್ಲಾ 1 8 0 ನೋಟಸ್ ವಗೈರೆ
							ಬಾಗಾಯಿತು	1 13				
							ಪರಂಪೋಕು.	92 36				
								1,254 10	ರೂ. 251	233 14 9	64 4 9	ಮೊಬಲಗು ಪಾವತಿ ತಾರೀಖು ವರಿಗೆ ಬಡ್ಡಿ ಸಹ.

ಎ. ಸುಬ್ರಮಣ್ಯಯ್ಯ,
ಫಾರ್ ಡೆಪ್ಯುಟಿ ಕಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಅಬ್‌ಸ್ಟ್ರಾಕ್ಟ್ ನೋಟಿಫಿಕೇರ್ಷ.

ಶಿಕಾರಿಪುರ ತಾಲ್ಲೂಕು ಕಣ್ಣೂರು ಇನಾಂ ಗ್ರಾಮದ ವೃತ್ತಿವಂತರಿಂದ ಸರಕಾರಕ್ಕೆ ಬರಬೇಕಾದ ಜೋಡೀ ಮೊಬಲಗು ಬಾರದೇ ಇರುವದರಿಂದ ತಾರೀಖು 10ನೆ ಆಕ್ಟೋಬರ್ 1ನೆ ಭಾಗದ ಮೈಸೂರು ಗೆಜೆಟ್ಟಿನ 500ನೆ ಸಂಪುಟದಲ್ಲಿ ಘಾಯಿಪು ಆಗಿರುವ ಡಿಟೇಲ್ಡ್ ನೋಟಿಫಿಕೇರ್ಷನಲ್ಲಿ ನಮೂದಿಸಿ ಇರುವ ಈ ಗ್ರಾಮವು ತಾರೀಖು 11—11—1907ನೆ ಸೋಮವಾರ ಬಿವಿ. 11 ಘಂಟೆಗೆ ಶಿಕಾರಿಪುರ ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಮಹಮ್ಮದ್ ರಜಾ,
ಫಾರ್ ಡೆಪ್ಯುಟಿ ಕಮಿಷನರ್.